# ನಿದ್ದೆ



ತೊಟ್ಟಿಲು ತೂಗುತಿದೆ ನಿದ್ದೆ ನನ್ನ
ಹಿಂದೆಂದೂ ಇಲ್ಲದಂತೆ ಈ ರಾತ್ರಿ
ತಾಯಿಯ ಮಮತೆಯ ಹಾಗೆ ನಿಶ್ಚರತ್ತಾಗಿ

ಮಲಯ ಮಾರುತ ನಾ ಕಂಡಿಲ್ಲ
ಆದರೂ ಊಹಿಸಬಲ್ಲೆ
ಗಂಧಮಾದನ ಪರ್ವತ ನಾ ನೋಡಿಲ್ಲ
ಆದರೂ ಕಲ್ಪಿಸಬಲ್ಲೆ

ಆಚೀಚೆ ತಡವಿ ಭಾವಿಸುತ್ತೇನೆ
ಪಕ್ಕದಲೊಂದು ಆಟಿಕೆಯೂ ಇಲ್ಲ
ಆಟಿಕೆಯಿಲ್ಲದ ಮಗು ಅದಕ್ಕೆ
ಆಟಿಕೆಯೆಂದರೇನೆಂದೆ ಗೊತ್ತಿಲ್ಲ
ಮನುಷ್ಯರೇ ಅಪರೂಪವಾದ ಊರಲ್ಲಿ
ಅಮಾನುಷರೇ ಮನುಷ್ಯರಾಗಿ

ಬರೇ ಕಾಡುಗಳು ಬೆಟ್ಟಗಳು ಆಶಾಢದ ಬೇಸರದ
ಮಳೆಗಳು
ಒಂದನ್ನೊಂದು ಗಾಳಿಗೆ ಒರೆಸಿ
ಕಿರುಗುಟ್ಟುವ ಬಿದಿರ ಮೆಳೆಗಳು
ಪ್ರಾಕೃತ ಜೀವಗ್ರಂಥಿಗಳಂಥ ಹೆಬ್ಬಂಡೆಗಳು
ಎಂದಿನಿಂದಲು ಹೀಗೇ ಕೂತಿವೆ
ಪಾಚಿಗಳು ಬೆಳೆದು ವೃದ್ಧರ ಮೈಯಂತಾದ ಅವುಗಳ ಮೈಗಳು
ಇರುಳ ಒಂಟಿತನ ಹೆಚ್ಚಿಸುವ ಜೀರುಂಡೆ ಸದ್ದುಗಳು
ವಟಗುಟ್ಟುವ ಕಪ್ಪೆಗಳು
ಅವುಗಳಲ್ಲೂ ನನಗೆ ಭಯ ಹುಟ್ಟಿಸುವ ಆ ಗೂಂಕುರ ಕಪ್ಪೆಗಳು
ಈಗ ನನ್ನ ಪ್ರತಿ ರಾತ್ರಿಯ ಸ್ಮೃತಿಗಳು
ಅದೇ ಭಯಗಳು ಅದೇ ಆಕರ್ಷಗಳು

ಹೇಗೆ ನೆರೆಯಲ್ಲಿ ಕೊಚ್ಚಿ ಹೋಗುತ್ತಿರುವೆ
ಮೈಗೆ ಘನ ಕಟ್ಟಿದಂತೆ ಮುಳುಗುತ್ತಿರುವೆ
ಆಳಕ್ಕೆ ಮಹಾ ಗಹನಕ್ಕೆ